ಸರ್ಟಿಫಿಕೇಟ್ ಮಾಡಿರುವಂಥಾದ್ದು ನಿಜ, ಶ್ರೀ ಸತ್ಯನಾರಾಯಣ ಎನ್ನುವಂತಹ ವ್ಯಕ್ತಿ ಅವರ ಈ ಸದಸ್ಯತ್ವವನ್ನು ರದ್ದು ಮಾಡಬೇಕು, ಮತ್ತು ಅವರ ಅಧ್ಯಕ್ಷ ಸ್ಥಾನವನ್ನು ಕೂಡ ರದ್ದು ಮಾಡಬೇಕೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ, ಇವತ್ತಿನವರೆಗೂ ಆ ಸುಳ್ಳು ಜಾತಿ ಸರ್ಟಿಫಿಕೇಟ್ ಮಾಡಿರುವಂಥಾದ್ದು ಹೌದೆಂದು ತೀರ್ಮಾನವಾಗಿರುವಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಸರ್ಕಾರ ತಕ್ಷಣ ಈ ವ್ಯಕ್ತಿಯ ಸದಸ್ಯತ್ವನ್ನು ರದ್ದು ಮಾಡಬೇಕು ಮತ್ತು ಅಧ್ಯಕ್ಷ ಸ್ಥಾನವನ್ನು ಕೂಡ ರದ್ದು ಮಾಡಬೇಕೆಂದು ಆ ಸಮಿತಿಯು ಕೂಡ ಹೇಳಿದೆ. ಅವರ ಕುಟುಂಬವರ್ಗದವರು ಇದರ ದುರುಪಯೋಗ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಈ ರೀತಿ ಮುಂದೆ ಆಗದಂತೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆನ್ನುವುದನ್ನು ತಮ್ಮ ಮುಖಾಂತರ ಕೇಳಲಿಚ್ಚಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ತಹಶೀಲ್ದಾರರ ಪ್ರಕಾರ ಗಂಗಮತಸ್ಥರು ಪರಿಶಿಷ್ಟ ಜಾತಿಗೆ ಬರದೇ ಇರುವಂಥವರು ಮತ್ತು ಇವರು ಜಾತಿ ಆಧಾರದ ಪತ್ರದಲ್ಲಿ ಸುಳ್ಳು ಮಾಹಿತಿಯಿಂದ ಅವರು ಅಧ್ಯಕ್ಷರು ಆಗಿದ್ದಾರೆ. ಈ ಜಾತಿ ಆಧಾರದ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

1.50 ಪಿ.ಎಂ.

ಆದುದರಿಂದ ಈ ತತಕ್ಷಣದಲ್ಲೇ ಅವರ ಅಧ್ಯಕ್ಷ ಪದವಿಯನ್ನು ಅನುರ್ಜಿತಗೊಳಿಸಬೇಕು ಮತ್ತು ಅದು ಪರಿಶಿಷ್ಟಜಾತಿಯವರಿಗೆ ಹೋಗಬೇಕಾಗಿರುತ್ತದೆ. ನಾನು ಈಗಾಗಲೇ ಅವರಿಗೆ ಲಿಖಿತವಾಗಿ ಆದೇಶವನ್ನು ಕಳುಹಿಸಿಕೊಡುತ್ತೇನೆ ಮತ್ತು ಇದನ್ನು ದುರಪಯೋಗಪಡಿಸಿಕೊಂಡಿದ್ದರೆ, ಕ್ರಮ ಕೈಗೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ, ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅಧ್ಯಕ್ಷರೆ, ಇವತ್ತು ಆದೇಶ ಹೊಗಲಿಲ್ಲವೆಂದರೆ, ಕೋರ್ಟಿನಿಂದ ತಡೆಯಾಜ್ಞೆ ತರುವಂಥ ಪ್ರಯತ್ನ ಮಾಡುತ್ತಿದ್ದಾರೆ, ದಯವಿಟ್ಟು ಆ ಆದೇಶವನ್ನು ಕಳುಹಿಸಿಕೊಡಬೇಕು.

ಅಧ್ಯಕ್ಷರು: ಮಾನ್ಯ ಸದಸ್ಯರಾದ ಶ್ರೀ ಜೆ.ಬಿ.ಶಿವಕುಮಾರ್‌ರವರು ಜಂಟಿ ಸದನ ಸಮತಿಯ ಮಧ್ಯಂತರ ವರದಿಯನ್ನು ಸದನದ ಮುಂದೆ ಮಂಡಿಸುವುದು.

6. ವರದಿಯನ್ನೊಪ್ಪಿಸುವುದು

ಶ್ರೀ ಜೆ.ಬಿ.ಶಿವಕುಮಾರ್ (ಅಧ್ಯಕ್ಷರು, ಜಂಟಿ ಸದನ ಸಮಿತಿ): ಅಧ್ಯಕ್ಷರೆ, ಕರ್ನಾಟಕ ರಾಜ್ಯಾದ್ಯಂತ ಬೆಳೆ ಹಾನಿ ಹಾಗೂ ರೈತರ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ರಚಿಸಿದ ಜಂಟಿ

ಸದನ ಸಮಮಿತಿಯ ಮಧ್ಯಂತರ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಆ ವರದಿಯ ಪ್ರತಿಯನ್ನು ನಮಗೆ ಹಂಚಿದ ಚರ್ಚೆ ಮಾಡಲು ನಮಗೆ ಅನುಕೂಲವಾಗುತ್ತದೆ. ಆದುದರಿಂದ ಅದನ್ನು ಇವತ್ತೇ ಕೊಟ್ಟರೆ ಸೋಮವಾರ ನಾವು ಚರ್ಚೆ ಮಾಡಬಹುದು.

MR.SPEAKER:I will make arrangements. I will see that it is circulated to all the members.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ವರದಿಯನ್ನು ಚರ್ಚೆಗೆ ತೆಗೆದುಕೊಂಡು ಇಲ್ಲಿಗೆ ಹೋಗಿ ಬಂದಿರುವುದರಿಂದ ಇಡೀ ರಾಜ್ಯದ ಜನತೆಗೆ ಏನು ಪರಿಣಾಮವಾಯಿತು; ಏನು ಸೌಲತ್ತುಗಳು ಸಿಗಬೇಕು ಎನ್ನುವುದು ಇಲ್ಲಿ ಚರ್ಚೆಯಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರದ ಮೇಲೆ ಒತ್ತಡತರಲು ಅವಕಾಶ ಮಾಡಿಕೊಡಬಹುದು.

ಅಧ್ಯಕ್ಷರು: ನಾನು ಚರ್ಚೆಗೆ ಸಮಯ ನಿಗದಿಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ಒಂದು ಅಂಶವೇನೆಂದರೆ, ತಾವು ನಮ್ಮೆಲ್ಲರನ್ನೂ ಸದಸ್ಯರನ್ನಾಗಿ ಮಾಡಿದ್ದೀರಿ, ನಾವು ತಮಗೆ ಅಭಾರಿಗಳಾಗಿರುತ್ತೇವೆ. ತಕ್ಷಣ 11ನೇ ತಾರೀಖಿನಂದು ಅಂತಿಮವರದಿ ಕೊಡಬೇಕೆಂದು ಈ ಸದನದಲ್ಲಿ ತೀರ್ಮಾನವಾಗಿದೆ. ಅಧಿವೇಶನ ಮುಂದಿನ ತಿಂಗಳು 15ನೇ ತಾರೀಖಿನವರಗೆ ಇದೆ ನಮಗೆ ವ್ಯಾಪಕವಾದ ರೆಫರೆನ್ಸ್ ಅನ್ನು ಕೊಟ್ಟಿದ್ದಾರೆ, 11ನೇ ತಾರೀಖಿನೊಳಗೆ ಇದು ಆಗುವುದಿಲ್ಲ. ನಾವು ಎಲ್ಲಾ ಕಡೆ ಓಡಾಡಬೇಕು, ನಮಗೆ ಇದರಲ್ಲಿ ಯಾರ ರಾಜಕೀಯವು ಇಲ್ಲ ಅವಧಿಯನ್ನು ವಿಸ್ತರಿಸಬೇಕು.

ಅಧ್ಯಕ್ಷರು: ನಿಮ್ಮ ಸಲಹೆಯನ್ನು ಅಂಗೀಕಾರ ಮಾಡಿದ್ದೇನೆ, ತಾತ್ಕಾಲಿಕ ವರದಿಯನ್ನು ಕೊಟ್ಟಿದ್ದೀರಿ, ಅದನ್ನು ಎಲ್ಲರಿಗೂ ಹಂಚಿಕೆ ಮಾಡುತ್ತೇವೆ, ಅದರ ಮೇಲೆ ಚರ್ಚೆ ಮಾಡೋಣ ವಿವರವಾದ ವರದಿಯನ್ನು ಸ್ವಲ್ಪ ನಿಧಾನವಾಗಿ ಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಸ್ವಲ್ಪ ಹೆಚ್ಚಿಗೆ ಸಮಯವನ್ನು ಕೊಡಬೇಕು.

ಅಧ್ಯಕ್ಷರು: ಆಯಿತು.

ಶ್ರೀ ಎಂ.ಪಿ.ಪ್ರಕಾಶ್: ಅವರ ಸಲಹೆಯನ್ನು ಸರ್ಕಾರ ಕೂಡ ಸ್ವೀಕಾರ ಮಾಡಬೇಕಾಗುತ್ತದೆ, ಆ ವಿಷಯವನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಅದಾದ ತಕ್ಷಣವೇ ಚರ್ಚೆಗೆ ಸಮಯ ನಿಗದಿಮಾಡತಕ್ಕಂಥದ್ದು ಒಳ್ಳೆಯದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ವರದಿ ಸದನದ ಸ್ವತ್ತಾದ ಮೇಲೆ ಚರ್ಚೆಗೆ ತೆಗೆದುಕೊಳ್ಳುವುದು ಬಿಡುವುದು ಸದನಕ್ಕೆ ಸಂಬಂಧಪಟ್ಟದ್ದು. ನೀವು ಒಪ್ಪಿ, ಬಿಡಿ, ಅದು ಬೇರೆ ವಿಷಯ, ಅದು ಹೇಗಾಗುತ್ತದೊ ನೋಡೋಣ. ಆದರೆ ಇಲ್ಲಿ ಚರ್ಚೆಗೆ ಬರುವುದಿಲ್ಲವೆನ್ನುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ವರದಿಯನ್ನು ಇಲ್ಲಿ ಮಂಡಿಸಿದ್ದಾರೆಂದ ತಕ್ಷಣವೇ ಸರ್ಕಾರ ಅದರ ಬಗ್ಗೆ ಪ್ರತಿಕ್ರಿಯೆ ಮಾಡದಿದ್ದರೆ ಇಲ್ಲಿ ಚರ್ಚೆಯಾಗುವುದಿಲ್ಲ; ಅದನ್ನು ತಿರಸ್ಕಾರನಾದರೂ ಮಾಡಬೇಕಾಗುತ್ತದೆ ಅಥವಾ ಪುರಸ್ಕಾರನಾದರೂ ಮಾಡಬೇಕಾಗುತ್ತದೆ; ಅದಾದ ಮೇಲೆ ಇಲ್ಲಿ ಚರ್ಚೆಮಾಡಬೇಕಾಗುತ್ತದೆ. ಎಷ್ಟೋ ಸಾರಿ ಈ ಬೇಡಿಕೆಗಳನ್ನು ಇಟ್ಟಿರುತ್ತೇವೆ. ಆದುದರಿಂದ ಸರ್ಕಾರ ಅದರ ಬಗ್ಗೆ ನಿಲುವನ್ನು ತೆಗೆದುಕೊಂಡ ಮೇಲೆ ತಾವು ನಿರ್ಣಯ ಮಾಡಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ಸದನದ ಸ್ವತ್ತಾದ ಮೇಲೆ ಅದು ನಮ್ಮ ಸ್ವತ್ತು.

ಶ್ರೀ ಎಂ.ವೀರಪ್ಪಮೊಯಿಲಿ: ನ್ಯಾಯಾಂಗ ತನಿಖೆ ವರದಿ ಸ್ವೀಕಾರ ಮಾಡಿದ ಮೇಲೆಯೇ ಈ ಸದನಕ್ಕೆ ಬರಬೇಕು ಈ ವರದಿ ಆಮೇಲೆಯೇ ಇಲ್ಲಿ ಮಂಡನೆಯಾಗಬೇಕು. ಆ ಜಂಟಿ ಸದನದ ಸಮಿತಿಯ ವರದಿ ಸದನದ ಸ್ವತ್ತಾಗಿದೆ ಚರ್ಚೆಯನ್ನು ಆಗಲೇ ಮಾಡಬಹುದು.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಗಿದೆ, ವರದಿಯ ಪ್ರತಿಯನ್ನು ಹಂಚಲಾಗುವುದು.

ಶ್ರೀ ಎಂ.ವೀರಪ್ಪಮೊಯಲಿ: ತಾವು ದಯವಿಟ್ಟು ವರದಿಯನ್ನು ಹಂಚಿ, ಸೋಮವಾರ ಚರ್ಚೆ ಮಾಡೋಣ, ಆಮೇಲೆ ಸರ್ಕಾರ ಬೇಕಾದರೆ ನಿರ್ಣಯ ತೆಗೆದುಕೊಳ್ಳಲಿ.

ಅಧ್ಯಕ್ಷರು: ಈಗ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬೇಡಿಕೆಗಳ ಮೇಲೆ ಚರ್ಚೆಗೆ ಉತ್ತರ ಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಅನೇಕ ಶಾಸಕಮಿತ್ರರು ಈ ವಿಚಾರದಲ್ಲಿ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲೂ ಮಾನ್ಯ ಪ್ರತಾಪಚಂದ್ರಶೆಟ್ಟಿಯವರು, ವಸಂತ ಸಾಲಿಯಾನ್‌ರವರು ಅದರಲ್ಲಿ ವಿಶ್ವೇಶ್ವರ ಹೆಗ್ಡೆಯವರು ಬಹಳ ಮುಖ್ಯವಾದಂಥ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೆ, ನಮಗೆ ಮಾತನಾಡುವುದಕ್ಕೆ ಅವಕಾಶ

ಕೊಡಬೇಕು, ನಿನ್ನೆ ದಿವಸ ಅಧ್ಯಕ್ಷರು ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದಕ್ಕೆ ಕೇಳುತ್ತಿದ್ದೇವೆ ಇಲ್ಲದಿದ್ದರೆ ಕೇಳುತ್ತಿರಲಿಲ್ಲ, ನಿನ್ನೆ ದಿವಸ ನಾವು ಮಾತನಾಡಲಿಲ್ಲ.

ಅಧ್ಯಕ್ಷರು: ನಿನ್ನೆ ದಿವಸ ಮಾತನಾಡಬೇಕಾಗಿತ್ತು. ನೀವು ಪ್ರತಿಸಾರಿ ಪ್ಲೈಂ ಟೈಂ ಕೇಳಿದರೆ ನಾನು ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ನೋಡಿ, ರಾಜ್ಯಪಾಲರ ಭಾಷಣದ ಮೇಲೆ, ಆಯವ್ಯಯದ ಮೇಲೆ ಪ್ರತಿಸಾರಿ ಪ್ರತ್ಯೇಕ ಟೈಮಿಂಗ್ಸ್ ಅನ್ನು ಪ್ರತ್ಯೇಕವಾಗಿ ಸ್ಲಾಟ್ ಮಾಡಬೇಕೆಂದರೆ ಕಷ್ಟವಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿನ್ನೆ ದಿವಸ ಅಧ್ಯಕ್ಷರು ಹೇಳಿದ್ದರು, ಅದಕ್ಕೋಸ್ಕರ ನಿಮಗೆ ಕೇಳುತ್ತಿದ್ದೇನೆ, ಅದರ ಮೇಲೆ ನಿಮ್ಮ ಇಷ್ಟ.

ಅಧ್ಯಕ್ಷರು: ದಯಮಾಡಿ ನನ್ನ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು. ಇವತ್ತು ಶುಕ್ರವಾರ, ನಾನ್ ಅಫಿಶಿಯಲ್ ಡೇ. ಈಗಾಗಲೇ ಎರಡು ಗಂಟೆಯಾಗುತ್ತಿದೆ, ಅವರ ಉತ್ತರವಾದ ಮೇಲೆ ಮತಕ್ಕೆ ಹಾಕಬೇಕು. ದಿನಾಂಕ: 27,28 ಈ ಎರಡು ದಿವಸ ನಾವು ಭೇಟಿಯಾಗುವುದು, 30ನೇ ತಾರೀಖು ರಜೆ ಕೊಡಬೇಕು ಎಂದು ಒಂದು ಪ್ರಸ್ತಾವನೆ ಬಂದಿದೆ ನಾಲ್ಕುದಿವಸ ರಜೆ ಇರುತ್ತದೆ, ಈಗ ಬಿಜೆಪಿಯವರದ್ದು ನ್ಯಾಷನಲ್ ಎಕ್ಸಿಕ್ಯೂಟಿವ್ ಮೀಟಿಂಗ್ ಇರುತ್ತದೆ, ಆದುದರಿಂದ ದಿನಾಂಕ: 4,5ನೇ ತಾರೀಖಿನಂದು ನಮಗೆ ತೊಂದರೆ ಇದೆಯೆಂದು ಅವರು ಒಂದು ಮನವಿಯನ್ನು ಕೊಟ್ಟಿದ್ದಾರೆ. I have to take a decision about that also in the B.A.C., on monday. Finally, the Government may agree for the extenison of the session also. ತೊಂದರೆಯಾಗುತ್ತದೆ, ಎಲ್ಲರೂ ಪ್ರೋಗಾಂ ಫಿಕ್ಸ್ ಮಾಡಿಕೊಂಡಿರುತ್ತಾರೆ, ಬೇಡಿಕೆಗಳನ್ನು ಚರ್ಚೆ ಇಲ್ಲದೆ ಗಿಲೊಟಿನ್‌ಗೆ ಹಾಕುವುದು ನನಗೆ ಇಷ್ಟವಿಲ್ಲ, ತಾವು ದಯಮಾಡಿ ನನ್ನ ಜೊತೆ ಸಹಕರಿಸಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಗ್ರಾಮೀಣಾಭಿವೃದ್ಧಿಯ ಬಗ್ಗೆ ನಾಲ್ಕು ಜನ ಸದಸ್ಯರು ಮಾತ್ರ ಮಾತನಾಡಿದ್ದಾರೆ, ನಿನ್ನೆ ದಿವಸ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶಕೊಡುತ್ತೇನೆಂದು ಹೇಳಿದ್ದರು ಅದರ ಮೇಲೆ ನಿಮ್ಮ ಇಷ್ಟ.

ಅಧ್ಯಕ್ಷರು: ನನ್ನ ಇಷ್ಟವೆಂದರೆ, ಬಹಳ ಚರ್ಚೆಯಾಗಬೇಕೆಂದಿದೆ, ನಿರ್ಬಂಧಗಳಿದ್ದಾವಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಗ್ರಾಮೀಣಾಭಿವೃದ್ಧಿಯ ಮೇಲೆ ನಾಲ್ಕು ಜನ ಸದಸ್ಯರು ಚರ್ಚೆ ಮಾಡಿದ್ದಾರೆ, ನಿನ್ನೆಯ ದಿವಸವೇ ಸಮಯ ಸಿಕ್ಕಿರುವುದು.

ಅಧ್ಯಕ್ಷರು: ನಾಲ್ಕು ಜನ ಸದಸ್ಯರು ಮಾತನಾಡಿರುವುದು ನಿಜ. ಇವತ್ತು

ಶೂನ್ಯವೇಳೆಯಲ್ಲಿ 18 ಸೂಚನೆಗಳು ಬಂದಿದ್ದಾವೆ. I have to conduct the business of the House. You must understand the difficulties of the Chair. ನನ್ನ ಉದ್ದೇಶ ಚರ್ಚೆ ಮೊಟುಕುಗೊಳಿಸಬೇಕೆಂದಲ್ಲ, ನಮ್ಮ ಕಷ್ಟ ಹೇಳುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ತಾವೇ ಬೇಡಿಕೆಗಳ ಮೇಲೆ ವ್ಯಾಪಕ ಚರ್ಚೆಯಾಗಬೇಕೆಂದು ಹೇಳಿದಿರಿ, ವಿಷಯ ಸಮಿತಿಗಳನ್ನು ಮಾಡಿದಿರಿ, ಈ ಬೇಡಿಕೆ ಮೇಲೆ ಕೇವಲ ನಾಲ್ಕು ಜನ ಮಾತ್ರ ಮಾತನಾಡಿರತಕ್ಕಂಥದ್ದು. ನಿನ್ನೆ ಅಧ್ಯಕ್ಷರು ಇವತ್ತು ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದರು, ನಾವು ಅದಕೋಸ್ಕರ ಕುಳಿತಿದ್ದೇವೆ.

ಅಧ್ಯಕ್ಷರು: ಈಗ ಸಮಯವನ್ನೇನಾದರೂ ಉತ್ಪತ್ತಿ ಮಾಡಿ ಹೆಚ್ಚು ಮಾಡುವುದಕ್ಕೆ ಸಾಧ್ಯವಿದ್ದಿದ್ದರೆ ಮಾಡುತ್ತಿದ್ದೆ.

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರೆ, ಪ್ರತಿ ವಿಷಯದ ಮೇಲೂ ಮಾತನಾಡುವುದಾದರೆ, ಕಳೆದ ನಾಲ್ಕು ದಿವಸಗಳಿಂದ ಈ ಬೇಡಿಕೆ ಬರುತ್ತಿದೆ. ನಿಜಕ್ಕೂ ಕೂಡ ತಾವು ಬಹಳ ಸಂಕಷ್ಟದ ಸ್ಥಿತಿಯಲ್ಲಿದ್ದೀರಿ. ಈಗ ನಾವು ಸಮಯವನ್ನು ನಿಗಧಿ ಮಾಡುತ್ತೇವೆ, ಪ್ರತಿ ವಿಷಯದಲ್ಲೂ ಪ್ರತಿಯೊಂದು ವಿಚಾರಕ್ಕೂ ಮಾತನಾಡುತ್ತೇವೆಂದು ನಿಂತುಕೊಂಡಾಗ, ಈ ನಿಗದಿತ ವೇಳಪಟ್ಟಿಗೆ ಅನುಗುಣವಾಗಿ ಕಾರ್ಯಕಲಾಪಗಳು ನಡೆಯುವುದಿಲ್ಲ, ದಯವಿಟ್ಟು ತಾವು ಸಹಕಾರ ಕೊಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ವಿಷಯ ಸಮಿತಿಗಳನ್ನು ರದ್ದು ಮಾಡಿದಿರಿ, ತಾವು ನಿನ್ನೆ ಚರ್ಚೆಗೆ ಕಾಲಾವಕಾಶ ಕೊಡುತ್ತೇವೆಂದು ಹೇಳಿದಿರಿ ಗ್ರಾಮಾಣಾಭಿವೃದ್ಧಿಯಂಥ ಬಹಳ ಪ್ರಮುಖವಾದಂಥ ಒಂದು ಇಲಾಖೆಯ ಚರ್ಚೆಗೆ ನಾಲ್ಕು ಜನ ಸದಸ್ಯರು ಚರ್ಚೆ ಮಾಡಿ ಉತ್ತರ ಕೊಡುವುದೆಂದು ಹೇಳಿದರೆ ಹೇಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಅದಕ್ಕೆ ನಾನು ನಿನ್ನೆ ತಾನೆ ತಮಗೆ ಪತ್ರಬರೆದಿರಬೇಕು, ಅದು ತಮಗೆ ತಲುಪಿದೆಯೋ ಏನೋ ಗೊತ್ತಿಲ್ಲ.

ಅಧ್ಯಕ್ಷರು: ತಲುಪಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ದಿನಾಂಕ 15 ರಿಂದ 22ನೇ ತಾರೀಖಿನವರೆಗೆ ನಡೆದಂಥ ಎಲ್ಲಾ ಕಾರ್ಯಕಲಾಪಗಳನ್ನು ನೋಡಿದಾಗ ನಾವೇನು ವಿಷಯ ಸಮಿತಿಗಳನ್ನು ರದ್ದು ಮಾಡಿ ಈ ಸದನದಲ್ಲೇ ಬಹಳ ದೀರ್ಘವಾಗಿ ಚರ್ಚೆ ಮಾಡಿ ಪ್ರತಿಯೊಂದು ಬೇಡಿಕೆ ಮೇಲೆ ಬೆಳಕುಚೆಲ್ಲತಕ್ಕಂಥ ವ್ಯವಸ್ಥೆಯಾಗುತ್ತದೆ ಏನೋ ಎಂದು ತಿಳಿದುಕೊಂಡಿದ್ದೆವು. ಶೂನ್ಯವೇಳೆ, ಪ್ರಶ್ನೋತ್ತರ ವೇಳೆ ಇವತ್ತು ರೋಟಿನ್

ಮ್ಯಾಟರ್, ಎಲ್ಲಾ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ನಡೆದಿದೆ, ಎಲ್ಲಾ ಸದನಗಳಲ್ಲೂ ನಡೆಯುತ್ತದೆ. ಆದರೆ ಇದನ್ನು ನೋಡಿದ ಮೇಲೆ ಆ ವಿಷಯ ಸಮಿತಿಯನ್ನು ರದ್ದು ಮಾಡಿದ್ದು ಸರಿಯಲ್ಲವೆನ್ನತಕ್ಕಂಥ ತೀರ್ಮಾನಕ್ಕೆ ಎಲ್ಲಾ ಸದಸ್ಯರು ಬಂದಿದ್ದಾರೆ. ಅದಕ್ಕೆ ನಾನು ದಯವಿಟ್ಟು ಕಳಕಳಿಯಿಂದ ತಮಗೆ ಕೈಜೋಡಿಸಿ ಕೇಳಿಕೊಳ್ಳುತ್ತೇನೆ, ಇದನ್ನು ರಿವ್ಯೂ ಮಾಡಿ, ತಾವು ಕನಿಷ್ಟಪಕ್ಷ ತಿಂಗಳಿಗೆ ಒಂದೇ ಸಾರಿ ವಿಷಯ ಸಮಿತಿಗಳು ಸಭೆ ಸೇರಬೇಕೆಂದು ಒಂದು ಗಡವು ಕೊಡಿ, ಅದಕ್ಕಿಂತ ಹೆಚ್ಚಿಗೆ ಬೇಡ.

ಅಧ್ಯಕ್ಷರು: ಈಗ, ವಿಷಯ ಸಮಿತಿ ರದ್ದು ಮಾಡಿದ ನಿರ್ಣಯ ನನ್ನದಲ್ಲ, ಪುನರ್ವಿಮರ್ಶೆ ಮಾಡಬೇಕೆಂದರೆ ಸದನದ ವಿವೇಚನೆಗೆ ಬಿಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದನ್ನು ಬೇಕಾದರೆ ನಾವೇ ವಹಿಸಿಕೊಳ್ಳೋಣ, ಅದಕ್ಕೆ ನಾವು ಪಶ್ಚಾತಾಪ ಪಟ್ಟಿದ್ದೇವೆ, ಅದಕ್ಕೆ ತಾವು ಶಿಕ್ಷೆ ಕೊಡಿಸುವುದಾದರೆ ಕೊಡಿಸಿ. ಇವತ್ತು ಏನಾಗಿದೆ ಎಂದರೆ, ಕನಿಷ್ಟ ಒಂದು ವಿಷಯ ಸಮಿತಿಯಿಂದ ಒಂದೊಂದು ಇಲಾಖೆಯ ಸಭೆಯನ್ನಾದರೂ ಕರೆದು ಸಮಿತಿಯಲ್ಲಿ 15 ಜನ ಸದಸ್ಯರಿದ್ದರೂ ಕೂಡ ಐದಾರು ಜನ ಸದಸ್ಯರು ಸೇರಿ, ಆಯವ್ಯಯ ಎಷ್ಟಿದೆ, ಎಷ್ಟು ಖರ್ಚಾಗಿದೆ, ಯಾವುದಕ್ಕೆ ಖರ್ಚಾಗಿಲ್ಲ, ಇಷ್ಟಾದರೂ ಕೇಳುತ್ತಿರುತ್ತಾರೆ. ಈಗ ಆ ಬೇಡಿಕೆ ಮೇಲೆ ಕೇಳತಕ್ಕಂಥದ್ದು ಯಾವುದೂ ಕೂಡ ಆಗುವುದಿಲ್ಲ. ಮೊನ್ನೆ ಕೆಲವು ಮಾತ್ರ ಚರ್ಚೆಯಾದವು, ಎಂಟು, ಒಂಭತ್ತು ಜನ ಚರ್ಚೆಯಲ್ಲಿ ಭಾಗವಹಿಸಿದರು, ಇದರಲ್ಲಿ ನಾಲ್ಕು ಜನ ಚರ್ಚೆಯಲ್ಲಿ ಭಾಗವಹಿಸಿದರು, ಕುಡಿಯುವ ನೀರಿನ ಬಗ್ಗೆ ಮಾತ್ರ ಎಂಟು, ಹತ್ತು ಜನರು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್, ವಿರೋಧಪಕ್ಷದ ನಾಯಕರು ಹೇಳಿದಂತೆ ನಮ್ಮದು ಅದೇ ಅಭಿಪ್ರಾಯ, ನಾವು ನಮ್ಮ ಶಾಸಕಾಂಗಪಕ್ಷದ ಸಭೆಯಲ್ಲೂ ಚರ್ಚೆ ಮಾಡಿದೊ, ಈ ಬಗ್ಗೆ ನಿಮ್ಮ ಮನಸನ್ನು ಒಲಿಸಬೇಕು, ಕೇಳಬೇಕೆಂದು ನಿರ್ಧಾರ ಮಾಡಿದೊ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೆ, ಈ ಸದನ ಮೊದಲು ಬೆಳಿಗ್ಗೆ 11 ಗಂಟೆಗೆ ಸೇರುತ್ತಿರಲಿಲ್ಲ, ಇನ್ನು ಮುಂಚೆ ಸೇರುತ್ತಿತ್ತು. ಆಮೇಲೆ ಅನೇಕ ದಿವಸ ರಾತ್ರಿ ಎಂಟು, ಒಂಭತ್ತು, ಹತ್ತು ಗಂಟೆಯವರೆಗೆ ಸದನವನ್ನು ನಡೆಸುತ್ತಿದ್ದೆವು. ಈಗ ಏನಾಗಿದೆ ಎಂದರೆ ಪತ್ರಿಕೆಯವರು ಚೀಟಿ ಕಳುಹಿಸುತ್ತಾರೆ, ಡಾಕ್ ಎಡಿಷನ್‌ಗೆ ಹೋಗಬೇಕು, ನಮಗೆ ಸಾಯಂಕಾಲ ತೊಂದರೆಯಾಗುತ್ತದೆ ಆಗುವುದಿಲ್ಲ ಬೇಗ ಮುಗಿಸಿ ಎಂದು ಹೇಳುತ್ತಾರೆ, ಸದಸ್ಯರು ನಮಗೆ ಸಂಜೆಯ ಹೊತ್ತಾಯಿತು ಆಗುವುದಿಲ್ಲ ಬೆಳಿಗ್ಗೆ ಬಂದೆವು ಎಂದು ಹೇಳುತ್ತಾರೆ, ಕೆಲವು ಸದಸ್ಯರಿಗೆ ದೂರದರ್ಶನದಲ್ಲಿ ಜಾಹಿರಾತಿಗಾಗಿ ಇರುವ ಪ್ರೈಂ ಟೈಮ್ ಸ್ಲಾಟ್ ರೀತಿ ಪ್ರೈಂ ಟೈಂ ಸ್ಲಾಟೇಬೇಕು. ತಮಗೆ ಸಿಕ್ಕ ಸಮಯದಲ್ಲಿ ಮಾತನಾಡುತ್ತೇವೆಂದು ಹೇಳುವುದಿಲ್ಲ. ಈ ಎಲ್ಲಾ ತೊಂದರೆಗಳನ್ನು ನಾನು

ನಿಭಾಯಿಸಿಕೊಂಡು ಸದನ ನಡೆಸಬೇಕಾಗಿದೆ, ಇವೆಲ್ಲಾ ಕಷ್ಟವಿದೆ. ತಾವು ಕಳಕಳಿಯಿಂದ ಹೇಳಿದ ಮಾತಿಗೆ ಶ್ರೀಮಾನ್ ಯಡಿಯೂರಪ್ಪನವರೂ ಬೆಂಬಲವಾಗಿ ನಿಂತಿದ್ದಾರೆ. ಈ ವಿಚಾರವನ್ನು ನಾವು ಸೋಮವಾರವೇ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೆಗೆದುಕೊಳ್ಳೋಣ. ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಭಾವನೆಗಳನ್ನು ನಾನು ಒಪ್ಪಿಕೊಂಡಿದ್ದೇನೆ, ಅದರಲ್ಲಿ ಎರಡನೇ ಮಾತಿಲ್ಲ. ಈಗ ನಾನು ಅವರಿಗೆ ಉತ್ತರ ಕೊಡಲು ಹೇಳಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈ ವಿಷಯದಲ್ಲಿ ನಮ್ಮದೇನೂ ತಕರಾರಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆ ಬಹಳ ಪ್ರಮುಖವಾದಂಥ ಇಲಾಖೆ. ಕೇವಲ 4-5 ಸದಸ್ಯರುಗಳು ಮಾತ್ರ ಇದರ ಮೇಲೆ ಮಾತನಾಡಿದ್ದಾರೆ. ಅಷ್ಟು ಸದಸ್ಯರು ಮಾತ್ರ ಮಾತನಾಡಿ ಒಂದು ಇಲಾಖೆಯ ಬೇಡಿಕೆಯನ್ನು ಅನುಮೋದನೆ ಮಾಡಬೇಕು ಎಂದರೆ, ಅದರ ಮೇಲೆ ಚರ್ಚೆ ಮಾಡುವುದು ಬೇಡ ಎಂದರೆ ಬೇಡ ಬಿಡಿ. ಅದಕ್ಕೆ ನಾವೇನು ಮಾಡುವುದು? ನಿನ್ನೆ ನಾವು ಅವಕಾಶ ಕೇಳಿದ್ದೇವೆ. ಅಧ್ಯಕ್ಷರು ಇವತ್ತು ನಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೇ, ನೀವೊಬ್ಬರು ಚರ್ಚೆಯಲ್ಲಿ ಭಾಗವಹಿಸದೇ ಇದ್ದ ಮಾತ್ರಕ್ಕೆ ಚರ್ಚೆಯಿಲ್ಲದೇ ಅದು ಪಾಸ್ ಆಯಿತು ಎನ್ನುವ ಅಭಿಪ್ರಾಯಕ್ಕೆ ನೀವು ಬರಬಾರದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಆ ಅಭಿಪ್ರಾಯಕ್ಕೆ ಬರುತ್ತಿಲ್ಲ. ಅದರಲ್ಲಿ ಸತ್ಯಾಂಶವಿಲ್ಲ. ಕೇವಲ ನಾನೊಬ್ಬ ಮಾತ್ರವಲ್ಲ. ಗ್ರಾಮೀಣಾಭಿವೃದ್ಧಿಯಂಥ ಒಂದು ದೊಡ್ಡ ಇಲಾಖೆಯ ಬಗ್ಗೆ ಎಷ್ಟು ಜನ ಚರ್ಚೆ ಮಾಡಿದ್ದಾರೆ ಎಂದು ಕಡತ ತೆಗೆದು ನೋಡಿ. ನಾನು ಮಾತನಾಡಬೇಕು ಎಂದು ಅಲ್ಲ ನಾನು ಹೇಳಿದ್ದುದು.

ಅಧ್ಯಕ್ಷರು: ಇದರ ಮೇಲೆ ಮಾತನಾಡಿದ್ದು 4ಜನ, ಅದು ನನಗೆ ಗೊತ್ತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಾಗಾದರೆ ನಾಲ್ಕು ಜನ ಮಾತ್ರ ಮಾತನಾಡಿ ಬೇಡಿಕೆಯನ್ನು ಅನುಮೋದನೆಗೆ ತೆಗೆದುಕೊಳ್ಳಬಹುದೇ?

ಶ್ರೀ ಎಂ.ಪಿ.ಪ್ರಕಾಶ್: ಇಂಥ ಬೇಡಿಕೆ ಇಂಥ ದಿವಸ ಬರುತ್ತದೆ ಎಂದು ನಾವು ನಿರ್ಧಾರ ಮಾಡಿದ ಮೇಲೆ, ಅದರ ಮೇಲೆ ಮಾತನಾಡಲು ಹೆಸರುಗಳನ್ನು ಸೂಚನೆ ಮಾಡಿರತಕ್ಕಂಥಾದ್ದರಲ್ಲಿ ನಾಲ್ಕು ಜನರು ಮಾತ್ರ ಹೆಸರು ಕೊಟ್ಟಿದ್ದಾರೆ. ಆ ನಾಲ್ಕು ಜನರಿಗೂ ತಾವು ಕಾಲಾವಕಾಶ ಕೊಟ್ಟಿದ್ದೀರಿ. ಬೇಡಿಕೆ ಇದೆ ಎಂದು ಗೊತ್ತಾದ ಮೇಲೂ ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಬಂತು. ಅದಕ್ಕೆ ಸುಮಾರು ಅರ್ಧ ದಿವಸಕ್ಕಿಂತ ಹೆಚ್ಚು ಚರ್ಚೆಯಾಗಿದೆ. ಅವರು ಚರ್ಚೆಯಲ್ಲಿ

ಭಾಗವಹಿಸಬೇಕು ಎನ್ನುವುದರ ಬಗ್ಗೆ ನನ್ನ ಸ್ವಾಗತ ಇದೆ. ಆದರೆ ನಾವು ನಿಯಮಾವಳಿಗಳ ಪ್ರಕಾರ ಸದನದ ಸಮಯವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವುದೂ ಸಹ ಮುಖ್ಯವಾಗಿದೆ. ಅನೇಕ ವಿಷಯಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಈಗ ಸ್ಪಷ್ಟೀಕರಣ ಕೇಳಿ, ನಾನು ಕೊಡಲು ತಯಾರಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾಲ್ಕು ಹೆಸರನ್ನು ಯಾರು ಕೊಟ್ಟಿದ್ದಾರೆ ಎಂದರೆ ನಮ್ಮ ಪಕ್ಷದವರು ಇಬ್ಬರು ಕೊಟ್ಟಿದ್ದಾರೆ, ಬಿ.ಜೆ.ಪಿ ಯವರು ಇಬ್ಬರು ಕೊಟ್ಟಿದ್ದಾರೆ. ಉಳಿದಂಥ ಸ್ವತಂತ್ರ ಅಭ್ಯರ್ಥಿಗಳು ನೇರವಾಗಿ ಕೊಡುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: ಅವರು ಹೆಸರನ್ನು ಕೊಡಬೇಕಲ್ಲವೇ? ಆದರೆ ಅವರು ಕೊಟ್ಟಿಲ್ಲ. ತಾವೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸುತ್ತೇವೆ ಎಂದು ಅವರು ಹೆಸರು ಕೊಟ್ಟಿಲ್ಲ. ಇದು ಕಳೆದ ಮೂರು ದಿವಸದಿಂದ ಬರುತ್ತಿದೆ. ತಾವು ಹೆಸರನ್ನು ಕೊಟ್ಟಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿನ್ನೆ ನಾವು ಅಧ್ಯಕ್ಷರ ಹತ್ತಿರ ಅನುಮತಿಯನ್ನು ಕೇಳಿದ್ದೇವೆ. ಇವತ್ತು ಮಾತನಾಡಲು ನಮಗೆ ಅಧ್ಯಕ್ಷರು ಹೇಳಿದ್ದರು. ಇಲ್ಲದಿದ್ದರೆ ನಾವು ಏಕೆ ಕೇಳುತ್ತಿದ್ದೆವು.

ಶ್ರೀ ಎಂ.ಪಿ.ಪ್ರಕಾಶ್: ನೀವು ಮೊದಲೇ ಹೆಸರನ್ನು ಕೊಡಬಹುದಿತ್ತಲ್ಲವೇ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾವು ಯಾವಗಲೂ ಹೆಸರನ್ನು ಕೊಡುವ ರೀತಿಯಲ್ಲೇ ನಿನ್ನೆಯೂ ಕೊಟ್ಟಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್: ನೀವು ನಿನ್ನೆ ಕೂಡ ಕೊಟ್ಟಿಲ್ಲ. ಕೇವಲ ಮೌಖಿಕವಾಗಿ ತಾವು ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಈಗಲೂ ಕೂಡ ತಾವು ಹೆಸರನ್ನು ಕೊಟ್ಟಿಲ್ಲ. ತಾವು ದಾಖಲೆಗಳನ್ನು ನೋಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಮೌಖಿಕವಾಗಿ ಪ್ರಸ್ತಾಪ ಮಾಡಿದ್ದು ಅಲ್ಲ. ನಾವು ಅನುಮತಿಯನ್ನು ಕೇಳಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಮ್ಮ ಪಕ್ಷದಿಂದ ನಾನು ಒಬ್ಬೊಬ್ಬರೇ ಸದಸ್ಯರು ಇರುವುದು. ನಮಗೆ ಅವಕಾಶ ಮಾಡಿಕೊಡದಿದ್ದರೆ ಹೇಗೆ?

ಅಧ್ಯಕ್ಷರು: ನಾನು ಹೇಳುವುದೇನೆಂದರೆ, ಎಡವಿದಾಗ ತಪ್ಪು ಎಂದು ಒಪ್ಪಿಕೊಳ್ಳದೇ ವಾದ ಮಾಡಲು ಆಗುವುದಿಲ್ಲ. ಈಗ ನಾವು ಒಂದು ಕೆಲಸ ಮಾಡೋಣ. ಈಗಾಗಲೇ 2.00 ಗಂಟೆಯಾಗಿದೆ. ಒಂದು ಗಂಟೆ ಊಟಕ್ಕೆ ಅಡ್ಜರ್ನ್ ಮಾಡಿ ಮತ್ತೆ 3.00 ಗಂಟೆಗೆ ಸೇರೋಣ. 3.30ರವರೆಗೆ ಇದರ ಬಗ್ಗೆ ಚರ್ಚೆಯಾಗಲಿ. 3.30ಕ್ಕೆ ತಾವು ಉತ್ತರವನ್ನು ಪ್ರಾರಂಭ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ನನಗೆ ಕನಿಷ್ಟವೆಂದರೆ ಒಂದು-ಒಂದೂವರೆಗಿಂತ ತಾಸಿಗಿಂತ ಕಡಿಮೆ ಆಗುವುದಿಲ್ಲ.

ಅಧ್ಯಕ್ಷರು: ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ 2 ರಿಂದ 3 ರವರೆಗೆ ಲಂಚ್‌ಗೆ ಬಿಡೋಣ, 3 ರಿಂದ 3.30ರವರೆಗೆ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ, 3.30ಕ್ಕೆ ಸರಿಯಾಗಿ ತಮ್ಮ ಉತ್ತರ ಪ್ರಾರಂಭವಾಗುತ್ತದೆ. ಉತ್ತರ ಕೊಡುವ ವೇಳೆಯಲ್ಲಿ ನಮ್ಮ ಸದನದ ಸಂಪ್ರದಾಯದಂತೆ ಮಂತ್ರಿಗಳಿಗೆ ನಾವು ಸಮಯವನ್ನು ನಿಗದಿ ಮಾಡುವುದಿಲ್ಲ. ಅದು ತಮ್ಮ ಪ್ರಿವಿಲೇಜ್‌ಗೆ ಬಿಟ್ಟಿದ್ದು. ಅವರನ್ನು ಕನ್ವಿನ್ಸ್ ಮಾಡಲು ನಿಮಗೆ ಎಷ್ಟು ಸಮಯ ಬೇಕೋ, ಅಷ್ಟನ್ನು ತೆಗೆದುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಸೋಮವಾರ ಉತ್ತರ ಕೊಡಿಸಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ದಯಮಾಡಿ ಮತ್ತೆ ಕನ್‌ಸೇಷನ್ ಇಲ್ಲ. ಈಗ ಸಭೆಯನ್ನು ಮುಂದೂಡುತ್ತಿದ್ದೇನೆ. ಪುನಃ 3.00 ಗಂಟೆಗೆ ಸಮಾವೇಶಗೊಳ್ಳುತ್ತೇವೆ. 3.00 ರಿಂದ 3.30ರವರೆಗೆ ಚರ್ಚೆಗೆ ತಾವೆಲ್ಲರೂ ಪಾಲ್ಗೊಳ್ಳಲು ತಯಾರಾಗಿ ಬನ್ನಿ. ಈಗ ಸಭೆಯನ್ನು ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸಭೆಯು 3-20ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು: ಮಾನ್ಯ ಅಧ್ಯಕ್ಷರು ಹೇಳಿರುವ ರೀತಿಯಲ್ಲಿ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು, ಪುಟ್ಟಣ್ಣಯ್ಯನವರು ಅರ್ಧಗಂಟೆಯಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು. ಅನಂತರ ಮಾನ್ಯ ಪ್ರಕಾಶ್‌ರವರು ಉತ್ತರ ಕೊಡಬೇಕು.

7) ವಿತ್ತೀಯ ಕಾರ್ಯ ಕಲಾಪ

1998-99ನೇ ಸಾಲಿನ ಬೇಡಿಕೆ ಸಂಖ್ಯೆ 54, 55ರ ಮೇಲಿನ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

+ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಇಲಾಖೆ, ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಲ್ಲಿ ಬಹಳ ಪ್ರಮುಖವಾದ ಮತ್ತು ನಿರ್ಣಯಾತ್ಮಕವಾದ ಪಾತ್ರವನ್ನು